**OS. No.82/2019** **PW-01**

**<u>ಸಾಕ್ಷಿಗೆ ದಿನಾಂಕ 01-06-2023 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು</u>**

**<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ .ಡಿ.ಡಿ. ವಕೀಲರಿಂದಃ</u>**

ನಾನು ಮತ್ತು ಪ್ರತಿವಾದಿ 2013 ನೇ ಇಸ್ವಿಯಲ್ಲಿ ನಮ್ಮ ನಮ್ಮ ಮನೆಗಳನ್ನು ಕಟ್ಟಿಸಿರುತ್ತೇವೆ ಎಂದರೆ ಸಾಕ್ಷಿದಾರರು ಇರಬಹುದು ಎಂದು ನುಡಿಯುತ್ತಾರೆ. ನಾವು ನಮ್ಮ ಮನೆಗಳನ್ನು ಕಟ್ಟಿ ಮುಗಿಸಲು ಆರು ತಿಂಗಳು ಅವಧಿ ಹೆಚ್ಚುಕಡಿಮೆಯಾಗಿದ್ದು, 2014 ನೇ ಇಸ್ವಿಯಲ್ಲಿ ನಮ್ಮ ಮನೆಗಳ ನಿರ್ಮಾಣಗಳ ಕಾರ್ಯವನ್ನು ಪೂರ್ಣಗೊಳಿಸಿರುತ್ತೇವೆ.

ನಾನು ನನ್ನ ಮನೆಯನ್ನು ಕಟ್ಟುವ ಕಾಲದಲ್ಲಿ ಮನೆಯನ್ನು ಕಟ್ಟಲು ಸಮಕ್ಷಮ ಪ್ರಾಧಿಕಾರಿಗಳಿಂದ ಅನುಮತಿಯನ್ನು ಪಡೆದುಕೊಂಡಿರುತ್ತೇನೆ. ಸದರಿ ದಾಖಲೆಯನ್ನು ನಾನು

ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇನೆ. ನನ್ನ ನಿವೇಶನದಲ್ಲಿ ಮನೆಯನ್ನು ಕಟ್ಟಿ 5x 25 ಮೀಟರನಷ್ಟು ಖಾಲಿಜಾಗೆಯನ್ನು ಗಿಡಗಳನ್ನು ನೆಡಲು ಬಿಟ್ಟಿರುತ್ತೇನೆ. ನಿವೇಶನ ಸಂಖ್ಯೆಃ 202 ರ ಪೂರ್ವಕ್ಕೆ ನಿವೇಶನ ಸಂಖ್ಯೆಃ 203 ನನ್ನದೇ ನಿವೇಶನ ಇರುತ್ತದೆ. ನಿವೇಶನ ಸಂಖ್ಯೆಃ 203 ಆದ ನಂತರ ಒಂದು ರಸ್ತೆ ಇರುತ್ತದೆ. ನಿವೇಶನ ಸಂಖ್ಯೆಃ 198 ನನ್ನ ನಿವೇಶನಕ್ಕೆ ಹೊಂದಿಕೊಂಡಂತೆ ಇದ್ದು ಸದರಿ ನಿವೇಶನ ನನ್ನ ನಿವೇಶನದ ಉತ್ತರಕ್ಕೆ ಇರುತ್ತದೆ. ಅದೇ ರೀತಿ ನಿವೇಶನ ಸಂಖ್ಯೆಃ 199 ನಿವೇಶನ ಸಹ ನನ್ನ ನಿವೇಶನಕ್ಕೆ ಹೊಂದಿಕೊಂಡತೆ ಇದ್ದು ಸದರಿ ನಿವೇಶನ ಸಹ ನನ್ನ ನಿವೇಶನದ ಉತ್ತರಕ್ಕೆ ಇರುತ್ತದೆ. ನಿವೇಶನ ಸಂಖ್ಯೆಃ 198 ಮತ್ತು 199 ನನ್ನ ಹೆಸರಿಗೆ ಮಂಜೂರಾಗಿರುತ್ತವೆ ಎಂದರೆ ಸರಿ.

ನಿಪಿ-9 ರಲ್ಲಿ ನಿವೇಶನಗಳ ವಿಸ್ತೀರ್ಣ ನಮೂದು ಮಾಡಲಾಗಿರುತ್ತದೆ ಎಂದರೆ ಸರಿ. ನಿಪಿ-5 ಅನ್ನು ನಾನು ನನ್ನ ವೈಯಕ್ತಿಕ ಪ್ರಭಾವ ಬೀರಿ ಸೃಷ್ಟಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿವೇಶನ ಸಂಖ್ಯೆಃ 198 ಮತ್ತು 199 ಗಳ ಮಂಜೂರಾತಿ ಪತ್ರಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನಾನು ಪ್ರತಿವಾದಿಗೆ ತೊಂದರೆ ನೀಡುವ ಉದ್ದೇಶದಿಂದ ನಾನು ಒಂದು ಸುಳ್ಳು ದಾವೆಯನ್ನು ನ್ಯಾಯಾಲಯದಲ್ಲಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು 2018 ನೇ ಇಸ್ವಿಯಲ್ಲಿ ಬೆಂಗಳೂರಿಗೆ ಹೋದಾಗ ಪ್ರತಿವಾದಿಯು ಮನೆಯನ್ನು ಕಟ್ಟಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಮನೆಯನ್ನು ಕಟ್ಟುವಾಗ ಪರವಾನಗಿ ತೆಗೆದುಕೊಳ್ಳುವ ಸಂಧರ್ಭದಲ್ಲಿ ಅನುಮೋದನೆ ಮಾಡಿದ ನಕ್ಷೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ಪ್ರತಿವಾದಿ 5 x 25 ಮೀಟರ ಅಳತೆಯ ಖಾಲಿ ಜಾಗವನ್ನು ಅತಿಕ್ರಮಣ ಮಾಡಿಕೊಂಡಿರುತ್ತಾನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮನೆಯ ಸುತ್ತಲು ತಡೆಗೋಡೆ (Compound) ಅನ್ನು ಕಟ್ಟಿರುತ್ತೇನೆ ಎಂದರೆ ಸಾಕ್ಷಿದಾರರು ನಾನು ಕಂಪೌಂಡ ಕಟ್ಟಿದ್ದು ಪ್ರತಿವಾದಿ ತಕರಾರು ಮಾಡಿದ್ದರಿಂದ ಅದನ್ನು ಅರ್ಧಕ್ಕೆ ನಿಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ-18, 19 ಮತ್ತು 20 ರಲ್ಲಿ ಕಾಣಿಸುತ್ತಿರುವ ಕಂಪೌಂಡ ನಮ್ಮ ಮನೆಯ ಪೂರ್ವ, ಪಶ್ಚಿಮ ಮತ್ತು ಉತ್ತರ ದಿಕ್ಷಿಗೆ ಇರುವ ಕಂಪೌಂಡ ಆಗಿದ್ದು ಅವುಗಳು ಪೂರ್ಣಗೊಂಡಿರುವುದಿಲ್ಲ.

ನಿವೇಶನ ಸಂಖ್ಯೆಃ 202 ಕ್ಕೆ ಹೊಂದಿಕೊಂಡಂತಹ 198 ಮತ್ತು 199 ಗಳ ವಿಸ್ತೀರ್ಣ 15 x 25 ಮೀಟರ ಇದ್ದು, ಸದರಿ 198 ಮತ್ತು 199 ನಿವೇಶನಗಳ ವಿಸ್ತೀರ್ಣ 20x 25 ಮೀಟರ ವಿಸ್ತೀರ್ಣ ಇರುತ್ತವೆ ಎಂದು ಸುಳ್ಳು ದಾಖಲೆ ಸೃಷ್ಟಿಸಿ, ಪ್ರತಿವಾದಿ 5 ಮೀಟರ ಖಾಲಿಜಾಗೆಯನ್ನು ಅತಿಕ್ರಮಣ ಮಾಡಿಕೊಂಡಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯು ಯಾವುದೇ ಜಾಗೆಯನ್ನು ಅತಿಕ್ರಮಣ ಮಾಡದೇ ಇದ್ದರೂ ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಚಿತ್ತಾಪೂರ.